ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿಸಿ. ಸಂಖ್ಯೆ: 61/2023**

ಪ್ರ.ವ.ಬೋ.ತಾಃ 03-07-2024

ಚಾಸಾಃ 1 ಪ್ರಾಸಾಃ 1

| | |
|---|---|
| ಸಾಕ್ಷಿಯ ಹೆಸರು | ಡಾ.ರಮೇಶ್ ಬಾಬು |
| ತಂದೆ/ಗಂಡನ ಹೆಸರು | ಲೇಟ್ ನರಸಿಂಹಪ್ಪ |
| ವಯಸ್ಸು | 54 ವರ್ಷ |
| ವೃತ್ತಿ | ಟಿ.ಎಚ್.ಒ. ಮಾಲೂರು ತಾಲ್ಲೂಕು, ಕೋಲಾರ |
| ವಾಸ | ಕೋಲಾರ |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ನಾನು 05-01-2017 ರಿಂದ 28-08-2023 ರವರೆ ಮಧುಗಿರಿಯಲ್ಲಿ ಟಿ.ಎಚ್.ಒ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು.

ದಿನಾಂಕಃ 23.07.2023 ರಂದು ಭಾನುವಾರ ಆದ್ದರಿಂದ ಕಚೇರಿ ಮುಚ್ಚಿತ್ತು. ಸುಮಾರು ಮಧ್ಯಾಹ್ನ 2.30 ಗಂಟೆಗೆ ಸಿ.ಸಿ. ಟಿ.ವಿ. ಕ್ಯಾಮೆರಾದಲ್ಲಿ ರೆರ್ಕಾಡ್ ಆಗಿರುವ ಪ್ರಕಾರ ಒಬ್ಬ ವ್ಯಕ್ತಿ ಬಂದು ಚಿಲಕವನ್ನು ಒಡೆದು ಬೀಗವನ್ನು ಕಿತ್ತು ಹಾಕಿ ಒಳಗಡೆ ಹೋಗಿ ಎರಡು ಸಿ.ಪಿ.ಯು. ಬ್ಯಾಟರಿಗಳು, ಎರಡು ಮೌಸ್ ಗಳು, ಬಯೋಮೆಟ್ರಿಕ್ ಡಿವೈಸ್ ಹಾಗೂ ಕಂಪ್ಯೂಟರ್ ಕನೆಕ್ಟೆಡ್ ವೈಯರ್‌ಗಳು, ಕೀ ಬೋರ್ಡ್ ನ್ನು ಕಳ್ಳತನ ಮಾಡಿರುತ್ತಾನೆ.

ಮಾನೀಟರನ್ನು ಕಳೆಗಡೆ ಬೀಳಿಸಿರುತ್ತಾನೆ. ದಿನಾಂಕಃ 24-07-2023 ರಂದು ಬೆಳಗ್ಗೆ 9.20 ಗಂಟೆಗೆ ಗ್ರೂಪ್ ಡಿ ನೌಕರನು ಪೋನ್ ಮಾಡಿ ಮೇಲ್ಕಂಡ ವಿಚಾರವನ್ನು ತಿಳಿಸಿರುತ್ತಾನೆ. ಕೂಡಲೇ ದೂರವಾಣಿ ಮೂಲಕ ಪೊಲೀಸರಿಗೆ ಮತ್ತು ಡಿ.ಎಚ್.ಒ. ತುಮಕೂರುರವರಿಗೆ ಕಳ್ಳತನವಾಗಿರುವ ವಿಷಯವನ್ನು ತಿಳಿಸಿರುತ್ತೇನೆ. ಮಧ್ಯಾಹ್ನ 12.20 ಗಂಟೆಗೆ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ದೂರಾಗಿದ್ದು ಅದರಲ್ಲಿರುವ ಸಹಿ ನನ್ನದೆ. ದೂರನ್ನು ನಿಪಿ.1 ಎಂದು, ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ಅದೇ ದಿನ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿರುತ್ತಾರೆ. ಮರು ದಿನ ಪಂಚನಾಮೆ ಮಾಡಲು ಸ್ಥಳಕ್ಕೆ ಭೇಟಿ ನೀಡಿರುತ್ತಾರೆ. ಸ್ಥಳದಲ್ಲಿ ನಾನು ಮತ್ತು ಅಕೌಂಟೆಂಟ್ ಅಸ್ಟೆಂಟ್ ಇದ್ದೆವು. ಪಂಚರ ಸಮಕ್ಷಮ ಪೊಲೀಸರು ಸ್ಥಳ ಪಂಚನಾಮೆಯನ್ನು ಮಾಡಿ ನನ್ನ, ಹಿರಿಯ ಆರೋಗ್ಯಾಧಿಕಾರಿ ಹಾಗೂ ಅಕೌಂಟೆಂಟ್ ಅಸ್ಟೆಂಟ್ ರವರ ಸಹಿಯನ್ನು ಪಂಚನಾಮೆಗೆ ಪಡೆದಿರುತ್ತಾರೆ. ಈಗ ನಾನು ನೋಡುತ್ತಿರುವ ದಾಖಲೆ ಪಂಚನಾಮೆ ಅದರಲ್ಲಿರುವ ಸಹಿ ನನ್ನದೆ. ಪಂಚನಾಮೆಯನ್ನು ನಿಪಿ.2 ಎಂದು, ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಪೊಲೀಸರು ಸ್ಥಳ ಪಂಚನಾಮೆಗೆ ಬಂದಾಗ ಪೊಟೋವನ್ನು ತೆಗೆದಿರುತ್ತಾರೆ. ಈಗ ನ್ಯಾಯಾಲಯದ ಮುಂದಿರುವ ಸಿ.ಪಿ.ಯು. ಎರಡು ಬ್ಯಾಟರಿ, ಬಯೋಮೆಟ್ರಿಕ್ ಡಿವೈಸ್, ಎರಡು ಮೌಸ್, 5 ಕನೆಕ್ಟಿಂಗ್ ವೈಯರ್ ಮತ್ತು ಕೀ ಬೋರ್ಡ್

ಗಳು ನಮ್ಮ ಕಚೇರಿಗೆ ಸಂಬಂಧಪಟ್ಟಿದ್ದು ಅವುಗಳನ್ನು ಆರೋಪಿ ಕಳ್ಳತನ ಮಾಡಿಕೊಂಡು ಹೋಗಿರುತ್ತಾನೆ. ಸದರಿ ಸಿ.ಪಿ.ಯು. ಎರಡು ಬ್ಯಾಟರಿ, ಬಯೋಮೆಟ್ರಿಕ್ ಡಿವೈಸ್, ಎರಡು ಮೌಸ್, 5 ಕನೆಕ್ಟಿಂಗ್ ವೈಯರ್ ಮತ್ತು ಕೀ ಬೋರ್ಡ್ ಗಳನ್ನು ಕ್ರಮವಾಗಿ ಎಂ.ಒ. 1 ರಿಂದ 11 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ</u>– ಮಾನ್ಯ ಸ.ಸ.ಅ. ರವರಿಂದಃ–**

ದಿನಾಂಕಃ 25–07–2023 ರಂದು ನನ್ನನ್ನು, ಮಹೇಶ್, ಮಂಜುನಾಥ್ ಮತ್ತು ರಾಜೇಂದ್ರರವರನ್ನು ಪೊಲೀಸರು ಠಾಣೆಗೆ ಕರೆಸಿ ನಮ್ಮ ಕಚೇರಿಯಲ್ಲಿ ಕಳ್ಳತನ ಮಾಡಿದ ಆರೋಪಿಯನ್ನು ತೋರಿಸಿರುತ್ತಾರೆ ಎಂದರೆ ನಾನು ಹೋಗಿರುವುದಿಲ್ಲ ಉಳಿದವರು ಹೋಗಿದ್ದರು ಎಂದು ಹೇಳುತ್ತಾರೆ. ಆ ಸಮಯದಲ್ಲಿ ನಾನು ಆರೋಪಿಯನ್ನು ಗುರುತು ಹಿಡಿದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಅಲ್ಲಗೆಳೆದ ಹೇಳಿಕೆಯ ಭಾಗವನ್ನು ನಿಪಿ.3 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u>– ಆರೋಪಿ ಪರವಾಗಿ ಶ್ರೀ.ಎಸ್.ಆರ್.ಎ. ವಕೀಲರಿಂದಃ–**

ನಮ್ಮ ಡಿ ಗ್ರೂಪ್ ನೌಕರ ಫೋನ್ ಮಾಡಿದಾಗ ನಾನು ಮನೆಯಲ್ಲಿದ್ದೆ. ವಿಚಾರ ತಿಳಿದ ತಕ್ಷಣ ನಾನು ಮನೆಯಲ್ಲಿದ್ದಾಗಲೇ ಪೊಲೀಸರಿಗೆ ಕರೆ ಮಾಡಿ ಕಳ್ಳತನದ

ವಿಚಾರವನ್ನು ತಿಳಿಸಿರುತ್ತೇನೆ. ಡಿ ಗ್ರೂಪ್ ನೌಕರನಿಂದ ಫೋನ್ ಬರುವ ಮೊದಲು ನಾನು ಕಚೇರಿಗೆ ಹೋಗಿಲ್ಲ. ನಾನು ದೂರು ಕೊಡಲು ಡಿ.ಎಚ್.ಓ.ರವರು ಲಿಖಿತವಾಗಿ ಅನುಮತಿ ನೀಡಿಲ್ಲ ಆದರೆ ದೂರವಾಣಿ ಮೂಲಕ ತಿಳಿಸಿರುತ್ತಾರೆ. ಡಿ.ಎಚ್.ಓ.ರವರು ಲಿಖಿತವಾಗಿ ದೂರು ಕೊಡಲು ಹೇಳಿದ ವಿಚಾರವನ್ನು ದೂರಿನಲ್ಲಿ ತಿಳಿಸಿಲ್ಲ. ಸ್ವತಃ ಮುಂದುವರೆದು ಹೇಳುತ್ತಾರೆ, ಡಿ.ಎಚ್.ಓ.ರವರಿಗೆ ಮಾಹಿತಿ ನೀಡಿದ ನಂತರ ನಾನು ದೂರು ದಾಖಲು ಮಾಡಿರುತ್ತೇನೆ. ದೂರು ದಾಖಲು ಮಾಡಿದ ದಿನದಿಂದೇ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಸ್ಥಳಕ್ಕೆ ಬರುವ ಮೊದಲು ಪೊಲೀಸರು ನಮಗೆ ತಿಳಿಸಿ ಬಂದರೋ ಇಲ್ಲವೋ ನನಗೆ ನೆನಪಿಲ್ಲ. ಪಂಚರಾದ ಸಾಕ್ಷಿಗಳು ನಮ್ಮ ಸಹಾಯಕ ಸಿಬ್ಬಂದಿಗಳು ಎಂದರೆ ಸರಿ. ಸಿ.ಸಿ. ಟಿ.ವಿ. ಪುಟೇಜನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ಪೊಲೀಸರಿಗೆ ನೀಡಿದ ಸಿ.ಸಿ. ಟಿ.ವಿ. ಪುಟೇಜ್ ನಲ್ಲಿ ಮುಖ ಸ್ಪಷ್ಟವಾಗಿ ಕಾಣಿಸುತ್ತಿಲ್ಲ ಎಂದರೆ ಸರಿಯಲ್ಲ. ಸಿ.ಸಿ. ಟಿ.ವಿ. ಪುಟೇಜ್ ನಲ್ಲಿ ದಿನಾಂಕ ಮತ್ತು ಸಮಯ ಡಿಸ್ಪ್ಲೇ ಆಗುತ್ತದೆ ಎಂದರೆ ಸರಿ. ನಾನು ಪೊಲೀಸರಿಗೆ ಸಿ.ಸಿ. ಟಿ.ವಿ. ಪುಟೇಜ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮಹಜರಿಗೆ ಬರುವ ಮೊದಲು ಪೊಲೀಸರು ನಮಗೆ ನೊಟೀಸ್ ಕೊಟ್ಟಿಲ್ಲ. ನಮ್ಮ ಕಚೇರಿ ಅಕ್ಕ ಪಕ್ಕ ತುಂಬಾ ಜನ ಸಂದಣಿ ಇದೆ ಎಂದರೆ ಸರಿಯಲ್ಲ. ಅಕ್ಕ ಪಕ್ಕದ ಸಾಕ್ಷಿಗಳನ್ನು ಪಂಚನಾಮೆಗೆ ಸಹಿ ಹಾಕಿಸಿಲ್ಲ ಎಂದರೆ ಸರಿ. ಮಹಜರ್ ನಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ.2 ಮಹಜರನ್ನು ನನ್ನ ಸಮಕ್ಷಮದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಲಾಪ್ ಟಾಪ್ ನಲ್ಲಿ

ಬೆರಳಚ್ಚು ಮಾಡಿ ಪ್ರಿಂಟ್ ತೆಗೆದಿರುತ್ತಾರೆ. ಸುಮಾರು 1.45 ರಿಂದ ಒಂದು ಗಂಟೆಯೊಳಗೆ ಪಂಚನಾಮೆ ತಯಾರು ಮಾಡಿರುತ್ತಾರೆ. ಎಂ.ಒ.1 ರಿಂದ 11ರ ತರಹದ ವಸ್ತುಗಳು ಎಲ್ಲಾ ಕಚೇರಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ಎಂ.ಒ.1 ರಿಂದ 11 ಎಲ್ಲಾ ವಸ್ತುಗಳು ಬಳಸದೆ ಇರುವ ವಸ್ತುಗಳು ಎಂದರೆ ಸರಿಯಲ್ಲ. ಎಂ.ಒ.1 ರಿಂದ 11 ನಮ್ಮ ಕಚೇರಿಯ ವಸ್ತುಗಳು ಎಂದು ಹೇಳಲು ವಿಶೇಷವಾದ ಗುರುತು ಇಲ್ಲಾ ಎಂದರೆ ಮೌಸ್ ಮತ್ತು ಕೀ ಬೋರ್ಡ್ ಹಾಗೂ ಬಯೋಮೆಟ್ರಿಕ್ ಡಿವೈಸ್ ಡೆಲ್ ಕಂಪನಿಯದ್ದಾಗಿದ್ದು ಉಳಿದ ವಸ್ತುಗಳ ಬಗ್ಗೆ ನಿಖರವಾಗಿ ಗೊತ್ತಿಲ್ಲ. ಎಂ.ಒ.1 ರಿಂದ 11ನ್ನು ಪೊಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ನನ್ನ ಸಮಕ್ಷಮ ಎಂ.ಒ.1 ರಿಂದ 11ನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಮ್ಮ ಕಚೇರಿಯಲ್ಲಿ ಕಳ್ಳತನ ಮಾಡಿಲ್ಲ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u>– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ